ಈ ಮೇಲಿನ ಎರಡು ರಸ್ತೆಗಳು ಮಧ್ಯಮ ಪಥ (ಇಂಟರ್ ಮಿಡಿಯಟ್ ಲೇನ್) ರಸ್ತೆಯಾಗಿದ್ದು, ಡಾಂಬರು ಹಾಕಿರುವ ಅಗಲ 5.50 ಮೀಟರ್‌ಗಳಾಗಿರುತ್ತದೆ.

ಆ) ಹೆಚ್ಚಿನ ವಾಹನ ಸಾಂದ್ರತೆಯನ್ನು ಅನುಸರಿಸಿ ಅಂತಹ ರಸ್ತೆಯ ಭಾಗಗಳನ್ನು 7.5 ಮೀಟರ್ ಅಗಲಕ್ಕೆ ದ್ವಿಪಥ ರಸ್ತೆಯನ್ನಾಗಿ ಮಾಡುವುದನ್ನು ಪ್ರಸ್ತಾಪಿಸಲಾಗಿದೆ. 1995-96ರ ಸಾಲಿನಲ್ಲಿ ಆದ್ಯತೆಪಡಿಸಿದ ರಸ್ತೆಯಾಗಿ ತುಮಕೂರು - ಹೊನ್ನಾವರ ರಸ್ತೆ ಆಯ್ದ ಭಾಗಗಳ ಅಭಿವೃದ್ಧಿಯನ್ನು ಹಮ್ಮಿಕೊಳ್ಳಲಾಗಿದೆ.

ಇ) ಕಡೂರು ತಾಲ್ಲೂಕಿನಲ್ಲಿ ಎಂ.ಡಿ.ಆರ್. ಒಟ್ಟು ಉದ್ದವು 296 ಕಿ.ಮೀ.ಗಳಾಗಿದ್ದು, ಇದರ ಪೈಕಿ 165 ಕಿ.ಮೀ. ಉದ್ದವು ಡಾಂಬರೀಕರಣವಾಗಿರುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಈ 50 ಕಿ.ಮೀ. ಏನು ನಮ್ಮ ಕಡೂರು ತಾಲ್ಲೂಕಿನಲ್ಲಿ ರಾಜ್ಯದ ಹೆದ್ದಾರಿ ಹೋಗಿದೆ ಸ್ವಾತಂತ್ರ್ಯ ಬಂದು 40 ವರ್ಷಗಳು ಕಳೆದರೂ ಕೂಡ ಅದರ ಅಗಲ ಜಾಸ್ತಿ ಆಗಿಲ್ಲ. ಆವತ್ತಿನ ವಾಹನ ಸಂಚಾರಕ್ಕೆ ಆ ರಸ್ತೆ ಯೋಗ್ಯವಾಗಿತ್ತು. ಇವತ್ತು ಏನಾಗಿದೆ ಅಂದರೆ ವಾಹನಗಳ ಸಂಚಾರ ಜಾಸ್ತಿ ಆಗಿದೆ. ಅದು ರಾಜ್ಯದ ಹೆದ್ದಾರಿಯಾದರೂ ಕೂಡ ಯಾವುದೇ ರಾಷ್ಟ್ರೀಯ ಹೆದ್ದಾರಿಗಿಂತ ಕಡಿಮೆ ಇಲ್ಲ.

ಅಧ್ಯಕ್ಷರು : ಕೃಷ್ಣಮೂರ್ತಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಭಾಷಣ ಮಾಡುವ ಹಾಗಿಲ್ಲ, ಉಪಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮುಂದಿನ ವರ್ಷ 1995-96ನೇ ಸಾಲಿನಲ್ಲಿ ಸಚಿವರು ಅದರ ಬಗ್ಗೆ ಏನಾದರೂ ರಸ್ತೆ ಅಗಲ ಮಾಡಲಿಕ್ಕೆ ಕ್ರಮವನ್ನು ಕೈಗೊಳ್ಳುತ್ತೀರಾ?

ಶ್ರೀ ಶಿವಾನಂದ ಹೆಚ್. ಕೌಜಲಗಿ : 1995-96ಕ್ಕೆ ಈ ಕೆಲಸಕ್ಕೆ 2 ಕೋಟಿ ರೂಪಾಯಿಗಳನ್ನು ಅಂದಾಜಿಗೆ ಮಂಜೂರಾತಿ ನೀಡಲಾಗಿದೆ. ಹಾಗೂ 1 ಕೋಟಿ ರೂಪಾಯಿಗಳನ್ನು ಇದೇ ವರ್ಷ ಅನುದಾನವನ್ನು ತೆಗೆದಿಡಲಾಗಿದೆ. 5.5 ಮೀಟರ್ ರಸ್ತೆ ಮಾಡಲಾಗುವುದು.

ಬೆಂಗಳೂರು - ದಕ್ಷಿಣ ಉತ್ತರ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರಗಳು

752 - ಶ್ರೀ ಎಂ. ಶ್ರೀನಿವಾಸ (ಉತ್ತರಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಉತ್ತರ ತಾಲ್ಲೂಕು ಅಭಿವೃದ್ಧಿ ಮಂಡಳಿ ವತಿಯಿಂದ 1990 ರಿಂದ 1994ರ ವರೆಗೆ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಹೆಸರು, ಅಂದಾಜು ಮೊತ್ತ ಸಾಧಿಸಿದ ಪ್ರಗತಿಯ ವಿವರ ಒದಗಿಸುವುದು.

ಆ) ಈ ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಕಾಮಗಾರಿಗಳ ವಿವರದ ಪಟ್ಟಿಯನ್ನು ಲಗತ್ತಿಸಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಕಾಮಗಾರಿಗಳ ವಿವರದ ಪಟ್ಟಿ

ಬೆಂಗಳೂರು ಉತ್ತರ ತಾಲ್ಲೂಕು

ಸಾಲು	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ	ಖರ್ಚು ಮಾಡಿದ ಹಣ
1990-91	152	59,48,580-00	57,73,425-00
1991-92	203	97,54,000-00	91,04,620-00
1992-93	175	1,36,67,350-00	1,23,68,195-00
1993-94	537	3,22,16,000-00	1,75,51,180-00
ಒಟ್ಟು	1067	6,15,85,930-00	4,47,97,420-00

ಬೆಂಗಳೂರು ದಕ್ಷಿಣ ತಾಲ್ಲೂಕು

1990-91	422	2,97,35,000-00	1,65,09,108-00
1991-92	570	4,16,00,000-00	2,17,78,218-00
1992-93	800	4,78,67,000-00	3,73,24,250-00
1993-94	604	3,40,00,000-00	3,36,53,518-00
ಒಟ್ಟು	2396	15,32,02,000-00	10,92,65,103-00
ಜುಮ್ಲಾ	3463	21,47,87,930-00	15,40,62,523-00

ಶ್ರೀ ಎಂ. ಶ್ರೀನಿವಾಸ್ : ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನಲ್ಲಿ ನಾನು ಬರೆದುಕೊಟ್ಟ ಕಾಮಗಾರಿಗಳ ಬಗ್ಗೆ ಒತ್ತಡದಿಂದ ಕೆಲಸಗಳು ಆಗದೆಯೇ ಬಿಲ್ಲುಗಳು ಆಗಿವೆ. ಅದಕ್ಕೋಸ್ಕರವಾಗಿ ಒಬ್ಬ ಮುಖ್ಯ ಇಂಜಿನಿಯರನ್ನು ನೇಮಿಸಿ ಎನ್‌ಕ್ವೈರಿ ಮಾಡಿಸುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈ ತರಹ ಆಗಿರುವ ನಿರ್ದಿಷ್ಟವಾದಂಥ ಪ್ರಕರಣಗಳನ್ನು ಕೊಟ್ಟರೆ, ಖಂಡಿತವಾಗಿಯೂ ವಿಚಾರಣೆಯನ್ನು ಮಾಡಿಸಲಿಕ್ಕೆ ನಾನು ವಿಚಾರ ಮಾಡುತ್ತೇನೆ. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರತಕ್ಕಂಥಾದ್ದೇನೆಂದರೆ ಹಿಂದೆ ಇದ್ದಂಥ ಲಿಂಗಯ್ಯ ಶೆಟ್ಟಿ ಎನ್ನತಕ್ಕಂಥ ಬಿ.ಡಿ.ಓ. ರವರ ಮೇಲೆ ಸಿ.ಓ.ಡಿ. ವರದಿ ಬಂದಾಗ ಅವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ಸುಧಾಕರ್ ಎನ್ನುವ ಇನ್ನೊಬ್ಬರ ಮೇಲೆ ಆಪಾದನೆ ಬಂದಾಗ ಅವರನ್ನು ಅಮಾನತ್ತಿನಲ್ಲಿ ಇಟ್ಟಿರತಕ್ಕಂಥ ಸಂದರ್ಭದಲ್ಲಿ ಅವರು ಆಡಳಿತ ಮಂಡಳಿಗೆ ಹೋಗಿ ಆ ವಿಚಾರದಲ್ಲಿ ತಡೆಯಾಜ್ಞೆಯನ್ನು ತಂದಿದ್ದಾರೆ. ಇದೂ ಕೂಡ ಒಂದು ಹೊಸ ವಿಷಯ. ಅಮಾನತ್ತಿನಲ್ಲಿ ಇಟ್ಟಿರತಕ್ಕಂಥ ವಿಚಾರದಲ್ಲಿ ಆಡಳಿತಾತ್ಮಕ ಟ್ರಿಬ್ಯೂನಲ್ ಅವರಿಗೆ ತಡೆಯಾಜ್ಞೆಯನ್ನು ಕೊಟ್ಟಿದೆ. ಅದರ ಬಗ್ಗೆಯೂ ಕೂಡ ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಂ. ಶ್ರೀನಿವಾಸ್ : ತಾವು ಹೇಳಿದ ಹಾಗೆ ಇಬ್ಬರು ಬಿ.ಡಿ.ಓ.ಗಳನ್ನು ದಕ್ಷಿಣ ತಾಲ್ಲೂಕಿನಲ್ಲಿ ಸಸ್ಪೆಂಡ್ ಮಾಡಿದ್ದರು. ತಾವು ಪಟ್ಟಿಯಲ್ಲಿ ನೋಡುವ ಹಾಗೆ,

ಸುಮಾರು ಕೆಲಸಗಳು, ಶಾಲಾ ಕಟ್ಟಡಗಳು ಯಾವುದೇ ಸುಣ್ಣ ಬಣ್ಣ ಹೊಡೆಯದೆಯೇ ಬಿಲ್ಲುಗಳನ್ನು ಮಾಡಿ ಪೇಮೆಂಟ್ ಕೊಟ್ಟಿದ್ದಾರೆ. ಡಾಂಬರು ರಸ್ತೆಗಳನ್ನು ಹಾಕಿಲ್ಲ. ಚುನಾವಣೆಗೆ ಒಂದು ವಾರ ಅಥವಾ 10 ದಿವಸಗಳು ಇದ್ದಾಗ ಚೆಕ್‌ಗಳನ್ನು ಬರೆಯಬಾರದು ಎನ್ನುವ ಸರ್ಕಾರದ ಆದೇಶ ಇದ್ದರೂ ಸಹ, ಸುಮಾರು 28 ಲಕ್ಷ ರೂಪಾಯಿಗಳ ಪೇಮೆಂಟ್ ಆಗಿದೆ. ಇದರಲ್ಲಿ 16 ಲಕ್ಷ ರೂಪಾಯಿಗಳ ಕೆಲಸ ಆಗಿಲ್ಲ. ಕೆಂಗೇರಿ ಹೋಬಳಿ, ಉತ್ತರಹಳ್ಳಿ ಹೋಬಳಿ, ಯಶವಂತಪುರ ಹೋಬಳಿಗಳಲ್ಲಿ ಇದು ನಡೆದಿದೆ. ಅದಕ್ಕೆ ತಾವು ಒಬ್ಬ ಮುಖ್ಯ ಇಂಜಿನಿಯರ್ ನೇಮಿಸಿ ವಿಚಾರಣೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಬಹಳ ಗುರುತರವಾದಂಥ ಅಪಾದನೆಗಳನ್ನು ಮಾಡಿದ್ದಾರೆ. ಅವರು ತಿಳಿಸಿದ ಸ್ಥಳಗಳಲ್ಲಿ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ಇರುವುದರಿಂದ ಅಲ್ಲಿ ಬಿ.ಡಿ.ಓ. ಅವರು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಾರೆ. ಅಲ್ಲಿ ನಮ್ಮ ಕಾನೂನು ಪ್ರಕಾರ ನಡೆಯುವುದಿಲ್ಲ. ಈ ತರಹ ಸುಮಾರು 6.15 ಲಕ್ಷ ರೂಪಾಯಿಗಳಷ್ಟು ಬೇರೆ ಬೇರೆ ಕೆಲಸವನ್ನು 1994-95ರಲ್ಲಿ ಮಾಡಿದ್ದೇವೆ. ನಿರ್ದಿಷ್ಟವಾದಂಥ ಪ್ರಕರಣಗಳನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ನಾವು ಖಂಡಿತವಾಗಿಯೂ ಮಾಡುತ್ತೇವೆ. ಈ ಸದನದಲ್ಲಿ ಪ್ರಸ್ತಾಪ ಮಾಡಿರುವಂತೆ ನಾನು ಈ ವಿಚಾರದಲ್ಲಿ ಒಂದು ಜಾಗೃತ ಆಯೋಗವನ್ನು ಏರ್ಪಾಡು ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ : ಇಬ್ಬರನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಯಾವ ಕಾರಣದಿಂದ ಅವರನ್ನು ಸಸ್ಪೆಂಡ್ ಮಾಡಿದ್ದರು ಮತ್ತು ಅವರನ್ನು ಪುನಃ ಕೆಲಸಕ್ಕೆ ಏಕೆ ತೆಗೆದುಕೊಂಡರು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ತಮಗೆ ಗೊತ್ತಿರುವ ಹಾಗೆ "ಆಶ್ರಯ" ಯೋಜನೆಯಲ್ಲಿ ನಿವೇಶನಗಳನ್ನು ಹಂಚುವ ವಿಚಾರದಲ್ಲಿ ಆದಂಥ ಅವ್ಯವಹಾರಗಳ ಬಗ್ಗೆ ಹಿಂದಿನ ಸರ್ಕಾರದವರು ನೇಮಕ ಮಾಡಿದ್ದ ಸಿ.ಓ.ಡಿ. ತನ್ನ ವರದಿ ಕೊಟ್ಟಿದೆ. ಆ ವರದಿಯ ಆಧಾರದ ಮೇಲೆ ನನ್ನ ಹಿರಿಯ ಸಹೋದ್ಯೋಗಿಯಾದಂಥ ಮಾನ್ಯ ಜಾಲಪ್ಪನವರು ತಮ್ಮ ಇಲಾಖೆಗೆ ಬರತಕ್ಕಂಥ ಕೆಲವು ತಹಶೀಲ್ದಾರ್‌ಗಳನ್ನು ಅಮಾನತ್ತಿನಲ್ಲಿಟ್ಟರು. ಮತ್ತು ನನ್ನ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಸುಧಾಕರ್ ಮತ್ತು ಲಿಂಗಯ್ಯ ಶೆಟ್ಟಿ ಎನ್ನುವ ಇಬ್ಬರು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟೆವು. ಅದರಲ್ಲಿ ಲಿಂಗಯ್ಯ ಶೆಟ್ಟಿಯವರು ಆಡಳಿತ ಮಂಡಳಿಗೆ ಹೋಗಿಲ್ಲ. ಅವರು ಇನ್ನೂ ಅಮಾನತ್ತಿನಲ್ಲಿದ್ದಾರೆ. ಮತ್ತೊಬ್ಬರು, ಸುಧಾಕರ್ ಎನ್ನುವವರಿಗೆ ತಡೆಯಾಜ್ಞೆ ಸಿಕ್ಕಿದೆ, ಅವರು ಕೆಲಸದಲ್ಲಿ ಮುಂದುವರೆದಿದ್ದಾರೆ.

ಪ್ರಶ್ನೆ ಸಂಖ್ಯೆ : 879 :

ಶ್ರೀ ಬಾಳಾ ಸಾಹೇಬ್ ವರ್ಡರ್ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ನೀಡಿರುವ ಉತ್ತರದಿಂದ ನನಗೆ ಸಮಾಧಾನಕರವಾಗಿದೆ. ಆದ್ದರಿಂದ ನಾನು ಉಪಪ್ರಶ್ನೆಯನ್ನು ಕೇಳುವುದಿಲ್ಲ.

ಅಧ್ಯಕ್ಷರು : ಈ ಜಗದೀಶ ಪಾಟೀಲ ಅವರ ತಡೆಹಿಡಿದ ಪ್ರಶ್ನೆ ಸಂಖ್ಯೆ : 572 ಶ್ರೀ ಚಿಮ್ಮನ ಕಟ್ಟಿಯವರು ಕೇಳುತ್ತಾರೆ.

ಬೀಳಗಿ ಪಟ್ಟಣದಲ್ಲಿ ಕುಡಿಯುವ ನೀರಿನ ತೊಂದರೆ

572 - ಶ್ರೀ ಜಿ.ಟಿ ಪಾಟೀಲ್ (ಬೀಳಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?